ಲಿಖಿತ ಮೂಲಕ ಉತ್ತರಿಸುವ

ಕರ್ನಾಟಕ ವಿಧಾನ ಪರಿಷತ್ತು

ನೂರ ನಲವತ್ತನೆಯ ಅಧಿವೇಶನ

ಗುರುವಾರ, ದಿನಾಂಕ : 19 ನೇ ಮಾರ್ಚ್, 2020

ಕಾನ್‌ಸ್ಟೇಬಲ್‌ಗಳಿಗೆ ಒಂದೇ ರೀತಿ ವಿದ್ಯಾರ್ಹತೆ ನಿಗಧಿಗೊಳಿಸುವ ಬಗ್ಗೆ

ಶ್ರೀ ಆರ್. ಧರ್ಮಸೇನ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ):-

1280 (1504) ಮಾನ್ಯ ಗೃಹ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :-

(ಅ) ಕೆ.ಎಸ್.ಆರ್.ಪಿ., ಸಿ.ಎ.ಆರ್ ಮತ್ತು ಡಿ.ಎ.ಆರ್ ಕಾನ್‌ಸ್ಟೇಬಲ್ ಗಳು ಸಿವಿಲ್ ಪೊಲೀಸ್ ಕಾನ್‌ಸ್ಟೇಬಲ್ ಹುದ್ದೆಗೆ ಹೋಗಲು ಅವಕಾಶ ಇದೆಯೇ ; ಇದ್ದಲ್ಲಿ, ಅದಕ್ಕಿರುವ ಅರ್ಹತೆಗಳೇನು ;

(ಆ) 2015ರಿಂದ ಇಲ್ಲಿಯವರೆಗೆ ಕೆ.ಎಸ್.ಆರ್.ಪಿ., ಸಿ.ಎ.ಆರ್ ಮತ್ತು ಡಿ.ಎ.ಆರ್ ಕಾನ್‌ಸ್ಟೇಬಲ್‌ಗಳಲ್ಲಿ ಎಷ್ಟು ಜನರು ನಾಗರಿಕ ಸಿವಿಲ್ ಪೊಲೀಸ್ ಕಾನ್‌ಸ್ಟೇಬಲ್ ಹುದ್ದೆಗೆ ಆಯ್ಕೆಯಾಗಿದ್ದಾರೆ; (ಮಾಹಿತಿ ನೀಡುವುದು)

(ಇ) ಈ ರೀತಿ ಕಾನ್‌ಸ್ಟೇಬಲ್‌ಗಳು ಸಿವಿಲ್ ಕಾನ್‌ಸ್ಟೇಬಲ್ ಆಗಿ ಹೋಗುವುದರಿಂದ ಕೆ.ಎಸ್.ಆರ್.ಪಿ., ಸಿ.ಎ.ಆರ್ ಮತ್ತು ಡಿ.ಎ.ಆರ್ ಕಾನ್‌ಸ್ಟೇಬಲ್‌ಗಳ ಹುದ್ದೆ ಖಾಲಿಯಾಗಿ ಸಿಬ್ಬಂದಿಗಳ ಕೊರತೆಯುಂಟಾಗುವುದಿಲ್ಲವೆ;

(ಈ) ಎಲ್ಲಾ ವಿಭಾಗಗಳ ಪೊಲೀಸ್ ಕಾನ್‌ಸ್ಟೇಬಲ್‌ಗಳ ಹುದ್ದೆಗಳಿಗೂ ಏಕರೂಪವಾದ ವಿದ್ಯಾರ್ಹತೆ ನಿಗದಿಗೊಳಿಸಿ ನೇಮಕಾತಿ ಮಾಡಲು ಸರ್ಕಾರ ಕ್ರಮ ಕೈಗೊಳ್ಳುವುದೇ ?